

ಕೃಷಿ ವಿವಿಯ ಅಗ್ರಿವಾರ್ ಘಟಕದ ವತಿಯಿಂದ ಕೊಡಗಿನ ಗೋಣಿಕೊಪ್ಪದ ರಶ್ಮಿ ಅವರು ಬೆಳೆದ ಬೆಣ್ಣೆಹಣ್ಣನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಕಾರ್ಯಕ್ರಮಕ್ಕೆ ಕುಲಪತಿ ಡಾ. ಎಸ್ ರಾಜೇಂದ್ರ ಪ್ರಸಾದ್ ಶನಿವಾರ ಚಾಲನೆ ನೀಡಿದರು. ಮೂರು ಟನ್ ಹಣ್ಣನ್ನು ಜಿಕೆವಿಕೆ, ಹೆಬ್ಬಾಳ, ಯಲಹಂಕ, ಕೋರಮಂಗಲದ ಬಡಾವಣೆಗಳಲ್ಲಿ ಮಾರಾಟ ಮಾಡಲಾಯಿತು.

27-06-2021 Vk Pg 12

ಕೊಡಗಿನ ಗೋಣಿಕೊಪ್ಪದ ರೈತರು ಬೆಳೆದ ಮೂರು ಟನ್ ಬೆಣ್ಣೆ ಹಣ್ಣುಗಳನ್ನು ಹೆಬ್ಬಾಳ ಸುತ್ತಮುತ್ತಲಿನ ಪ್ರದೇಶಗಳ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಕಾರ್ಯಕ್ರಮಕ್ಕೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ರಾಜೇಂದ್ರ ಪ್ರಸಾದ್ ಶನಿವಾರ ಚಾಲನೆ ನೀಡಿದರು. ವಿವಿ ಸಿಬ್ಬಂದಿ ಉಪಸ್ಥಿತರಿದ್ದರು.

27-06-2021 Vv Pg 04

ಹಡಿಲು ಭೂಮಿಯಲ್ಲಿ ಭತ್ತ ಕೃಷಿಗೆ ಸಚಿವ ಬಿ.ಸಿ. ಪಾಟೀಲ್ ಚಾಲನೆ

ರಾಜ್ಯದಲ್ಲಿ ಆಹಾರ ಉತ್ಪಾದನೆ ಶೇ.10 ಹೆಚ್ಚಳ

ಶಾಸಕ ಕೆ. ರಘುಪತಿ ಭಟ್ ಅವರೊಂದಿಗೆ ಗದ್ದೆಗಿಳಿದ ಕೃಷಿ ಸಚಿವ ಬಿ.ಸಿ. ಪಾಟೀಲ್ ನಾಟಿ ಕಾರ್ಯಕ್ಕೆ ಚಾಲನೆ ನೀಡಿದರು.

ಗದ್ದೆಗಿಳಿದು ನಾಟಿ ಮಾಡಿ ಗಮನ ಸೆಳೆದ ಶಾಸಕ ಯು.ಟಿ. ಖಾದರ್

ವಿಕ ಸುದ್ದಿಲೋಕ ಉಡುಪಿ

ಲಾಕ್‌ಡೌನ್‌ನಿಂದಾಗಿ ಫ್ಯಾಕ್ಟರಿ ಸಹಿತ ಉದ್ಯಮ ಕ್ಷೇತ್ರಗಳೆಲ್ಲ ಬಂದ್ ಆಗಿದ್ದು, ರಾಜ್ಯದ ಯುವಕರು ಕೃಷಿ ಕ್ಷೇತ್ರದತ್ತ ಒಲವು ತೋರಿಸಿದ್ದಾರೆ. ಉತ್ತಮ ಮಳೆ ಹಾಗೂ ಲಾಕ್‌ಡೌನ್ ಪರಿಣಾಮ ರಾಜ್ಯದಲ್ಲಿ 153 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆಯಾಗಿದೆ. ಶೇ.10ರಷ್ಟು ಆಹಾರ ಉತ್ಪಾದನೆ ಹೆಚ್ಚಾಗಿರುವುದು ರಾಜ್ಯದ ಇತಿಹಾಸದಲ್ಲೇ ಪ್ರಥಮ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ.

ಹಡಿಲು(ಬಂಜರು) ಭೂಮಿ ಕೃಷಿ ಆಂದೋಲನದಡಿ ಕೇದಾರೋತ್ಥಾನ ಟ್ರಸ್ಟ್ ವತಿಯಿಂದ 110 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿ ನಡೆಸಲಾಗುತ್ತಿದೆ. ಶನಿವಾರ ಕೃಷಿ ನಾಟಿ ಕಾರ್ಯಕ್ಕೆ ಚಾಲನೆ ಹಾಗೂ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿ ಸಚಿವರು ಮಾತನಾಡಿದರು.

''ರಸಗೊಬ್ಬರ, ರಾಸಾಯನಿಕ ಸಿಂಪಡಣೆ ಮಾಡಿರುವ ವಿಷಪೂರಿತ ಆಹಾರ ಪದಾರ್ಥಗಳನ್ನು ನಾವೆಲ್ಲ ತಿನ್ನುತ್ತಿದ್ದೇವೆ. ಇದರಿಂದಾಗಿ ಆರೋಗ್ಯ, ಕೃಷಿ ಭೂಮಿಯ ಮೇಲೂ ಕೆಟ್ಟ ಪರಿಣಾಮಗಳಾಗಿವೆ. ಈ ನಿಟ್ಟಿನಲ್ಲಿ ಸಾವಯವ ಕೃಷಿಗೆ ಉತ್ತೇಜಿಸಲು 1 ಹೆಕ್ಟೇರ್ ಕೃಷಿ ಭೂಮಿಗೆ 10 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುತ್ತದೆ. ಸಾವಯವ ಕೃಷಿ ಹೆಚ್ಚಿಸುವ ಅವಶ್ಯಕತೆ ಇದೆ,'' ಎಂದರು.

''ಹಡಿಲು ಭೂಮಿಯಲ್ಲಿ ಕೃಷಿ ಕೆಲಸ ಕೈಗೆತ್ತಿಕೊಂಡು ಉಡುಪಿ ಜನರು ರಾಷ್ಟ್ರಕ್ಕೆ ಮಾದರಿಯಾಗಿದ್ದೀರಿ. ಕಳೆದ ಕೆಲ ವರ್ಷಗಳಿಂದ ಹಡಿಲು ಬಿದ್ದಿರುವ ಕೃಷಿಯಲ್ಲಿ ನಾಟಿ ಮಾಡಿದರೆ ಒಳ್ಳೆಯ ಫಲವತ್ತತೆಯೂ ಸಿಗುತ್ತದೆ,'' ಎಂದು ಅಭಿಪ್ರಾಯಪಟ್ಟರು.

ಶಾಸಕ ಕೆ. ರಘುಪತಿ ಭಟ್ ಮಾತನಾಡಿ, ''ಉಡುಪಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 20-25 ವರ್ಷಗಳಿಂದ ಹಡಿಲು ಬಿದ್ದಿರುವ 1,500 ಎಕರೆಯಲ್ಲಿ, ಕೇದಾರೋತ್ಥಾನ ಟ್ರಸ್ಟ್‌ನಿಂದ ಹಣ ಹಾಕಿ ಕೃಷಿ ಮಾಡುತ್ತಿದ್ದೇವೆ. ಇಲ್ಲಿ ಶೇ.100ರಷ್ಟು ಸಾವಯವ ಕೃಷಿ ಮಾಡುತ್ತೇವೆ,'' ಎಂದು ಹೇಳಿದರು.

ಆರೆಸ್ಸೆಸ್ ಹಿರಿಯ ಪ್ರಚಾರಕ ದಾಮೋದರ ರವೀಂದ್ರ, ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ. ರಾಘವೇಂದ್ರ ಕಿಣಿ, ಕೇದಾರೋತ್ಥಾನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಮುರಳಿ ಕಡೆಕಾರ್, ದಿನಕರ್ ಬಾಬು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಎಚ್. ಕೆಂಪೇಗೌಡ ಹಾಜರಿದ್ದರು.

15 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಬಂಜರು

ರಾಜ್ಯದಲ್ಲಿ ಸುಮಾರು 15 ಲಕ್ಷ ಹೆಕ್ಟೇರ್‌ನಷ್ಟು ಕೃಷಿ ಭೂಮಿ ಬಂಜರು ಬಿದ್ದಿದೆ. ಇದರಿಂದಾಗಿ ರಾಜ್ಯದ ಅಭಿವೃದ್ಧಿಯೂ ಕುಂಠಿತವಾಗುತ್ತದೆ. ಕೃಷಿಯನ್ನು ಕೆಳ ಹಂತದಲ್ಲಿ ನೋಡಲಾಗುತ್ತಿದೆ. ಡಾ. ಸ್ವಾಮಿನಾಥನ್ ಆಯೋಗದ ವರದಿ ಪ್ರಕಾರ ಕೃಷಿ ಕ್ಷೇತ್ರ ಶೇ.60ರಷ್ಟು ಉದ್ಯೋಗ ಸೃಷ್ಟಿಸುತ್ತದೆ. ಶೇ.20 ಜಿಎಸ್‌ಟಿ ಕೃಷಿಯಿಂದ ಬರುತ್ತದೆ. ಕೃಷಿ ಕ್ಷೇತ್ರ ಲಾಕ್‌ಡೌನ್ ಸಂದರ್ಭದಲ್ಲೂ ಧೃತಿಗೆಡದೆ ಸದೃಢವಾಗಿ ನಿಂತಿದೆ. ಕೃಷಿ ಭೂಮಿಯನ್ನು ಹಡಿಲು ಬಿಡುವುದು ರಾಷ್ಟ್ರದ್ರೋಹದ ಕೆಲಸ. ಭೂಮಿ ತಾಯಿಯನ್ನು ಬಂಜೆ ಮಾಡುವುದು ಪಾಪದ ಕೆಲಸ ಎಂದು ಸಚಿವ ಬಿ.ಸಿ.ಪಾಟೀಲ್ ಹೇಳಿದರು.